ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 14-05-1970

## *<u>ಸಮರ್ಪಣೆಯ ಗುಹ್ಯ ಅರ್ಥ</u>* (समर्पण का गुह्य अर्थ)

ಇಂದು ವತನದಿಂದ ಒಂದು ಉಡುಗೊರೆಯನ್ನು ತಂದಿದ್ದೇವೆ, ಯಾವ ಉಡುಗೊರೆ ಗೊತ್ತೇ? ಅವ್ಯಕ್ತ ರೂಪದ ಉಡುಗೊರೆಯೂ ಅವ್ಯಕ್ತವಾಗಿರುವುದಲ್ಲವೇ? ಇಂದು ವತನದಿಂದ ದರ್ಪಣ ತಂದಿದ್ದೇವೆ. ದರ್ಪಣವನ್ನು ಏಕೆ ತಂದಿದ್ದೇವೆ? ತಾವೆಲ್ಲರೂ ಯಾವ ವಿಶೇಷ ಕಾರ್ಯಕ್ರಮಕ್ಕಾಗಿ ಬಂದಿರುವಿರಿ? ಸಮರ್ಪಣೆ ಮಾಡಲು ಬಂದಿರುವಿರೋ ಅಥವಾ ಸಂಪೂರ್ಣರಾಗಲು ಬಂದಿರುವಿರೋ? ಎಲ್ಲರ ಅರ್ಪಣಮಯದ ಮುಖವನ್ನು ನೋಡಲು ಮತ್ತು ತೋರಿಸಲು ವತನದಿಂದ ದರ್ಪಣವನ್ನು ತಂದಿದ್ದೇವೆ. ಸಮರ್ಪಣೆಯಾಗಿರುವಿರೋ? ಎಲ್ಲರೂ ಆಗಿರುವಿರಾ? ನಾವು ಸಮರ್ಪಣೆಯಾಗಿದ್ದೇವೆ ಎಂದು ಈ ಸಭೆಯಲ್ಲಿ ಯಾರು ತಿಳಿದುಕೊಂಡಿದ್ದೀರಿ? ಯಾವುದಕ್ಕೆ ಸಮರ್ಪಣೆ ಎಂದು ಹೇಳಲಾಗುತ್ತದೆ? ದೇಹ ಅಭಿಮಾನದಿಂದ ಸಮರ್ಪಣೆ ಅಥವಾ ಸಂಪೂರ್ಣ ಅರ್ಪಣೆಯಾಗಿದ್ದೀರಾ? ಹೌದು ಅಥವಾ ಇಲ್ಲ ಎಂದು ಹೇಳಿ, ದೇಹ ಅಭಿಮಾನದಿಂದ ಸಂಪೂರ್ಣ ಅರ್ಪಣೆಯಾಗಿದ್ದೀರಾ? ಇದರಲ್ಲಿ ಹೌದು ಎಂದು ಏಕೆ ಹೇಳುವಿರಿ? ಸ್ವಭಾವ ಅರ್ಪಣೆಯಾಗಿದೆಯಾ? (ಇದರಲ್ಲಿ ಪುರುಷಾರ್ಥವಿದೆ) ಸ್ವಭಾವ ಅರ್ಪಣೆಯ ಸಮಾರಂಭವನ್ನು ಯಾವಾಗ ಮಾಡುವಿರಿ? ತಾವು ಕನ್ಯಾ ಸಮರ್ಪಣೆಯ ಸಮಾರಂಭವನ್ನು ಆಚರಿಸಲು ಬಂದಿರುವಿರಿ ಆದರೆ ಬಾಪ್ ದಾದಾ ಸ್ವಭಾವಗಳ ಸಮರ್ಪಣಾ ಸಮಾರಂಭವನ್ನು ಆಚರಿಸಲು ಬಯಸುತ್ತಾರೆ. ಅದನ್ನು ಯಾವಾಗ ಆಚರಿಸುವಿರಿ? ಆದ್ದರಿಂದ ದರ್ಪಣವನ್ನು ತಂದಿದ್ದೇವೆ ಎಂದು ಹೇಳಿದವು. ಅದರಲ್ಲಿ ಮೂರು ಮಾತುಗಳನ್ನು ನೋಡುತ್ತಿದ್ದೇವೆ. 1. ಸ್ವಭಾವ ಸಮರ್ಪಣೆ, 2.ದೇಹಾಭಿಮಾನದ ಸಮರ್ಪಣೆ ಮತ್ತು 3. ಸಂಬಂಧದ ಸಮರ್ಪಣೆ. ದೇಹ ಎಂದರೆ ಕರ್ಮೇಂದ್ರಿಯಗಳ ಸೆಳೆತದ ಸಮರ್ಪಣೆ, ಈ ಮೂರು ವಸ್ತುಗಳನ್ನು ದರ್ಪಣದಲ್ಲಿ ನೋಡುತ್ತಿದ್ದೇವೆ. ಸ್ವಭಾವದ ಸಮರ್ಪಣಾ ಸಮಾರಂಭವಾದಾಗ ಸಂಪೂರ್ಣ ಮೂರ್ತಿಯ ಸಾಕ್ಷಾತ್ಕಾರವಾಗುವುದು, ವರದಕ್ಷಿಣೆ ಏನು ಸಿಗುವುದು? ಈ ಸಂಪೂರ್ಣ ಸುಮಂಗಲಿತನ ಪ್ರಾಪ್ತಿಯಾದಾಗ ಶ್ರೇಷ್ಠ ಭಾಗ್ಯದ ವರದಕ್ಷಿಣೆ ಸ್ವತಃ ಸಿಗುವುದು. ಸದಾ ಸುಮಂಗಲಿ. ಎಷ್ಟು ತಾವು ಸದಾ ಸುಮಂಗಲಿಯರೋ ಅಷ್ಟು ಶ್ರೇಷ್ಠ ಭಾಗ್ಯವಂತರಾಗುತ್ತೀರಿ. ಸುಮಂಗಲಿಯ ಚಿಹ್ನೆಯಾಗಿದೆ ಬಿಂದಿ (ತಿಲಕ) ಯಾರು ಸದಾ ಸುಮಂಗಲಿಯರೋ ಅವರ ತಿಲಕ ರೂಪದ ಸ್ಮೃತಿ ಸದಾ ಕಾಯಂ ಆಗಿರುತ್ತದೆ. ಈ ಬಿಂದು ರೂಪದ ಸ್ಥಿತಿ ಸದಾ ಜೊತೆಗಿದ್ದರೆ ಅವರೇ ಸದಾ ಸುಮಂಗಲಿ. ಆದ್ದರಿಂದ ತಮ್ಮ ಸೌಭಾಗ್ಯದಿಂದ ಭಾಗ್ಯವನ್ನು ನೋಡಿಕೊಳ್ಳಿ. ಎಷ್ಟು ಸುಮಂಗಲತ್ವವೋ ಅಷ್ಟು ಭಾಗ್ಯ. ಎಷ್ಟು ಅವಿನಾಶಿ ಸುಮಂಗಲಿಯಾದರೆ ಅಷ್ಟು ಅವಿನಾಶಿ ಭಾಗ್ಯವಿರುತ್ತದೆ. ಸದಾ ತಮ್ಮ ಸುಮಂಗಲತೆಯನ್ನು ನೆನಪಿಟ್ಟುಕೊಳ್ಳಲು ನಾಲ್ಕು ಮಾತುಗಳನ್ನು ನೆನಪಿಡಿ. ಆದಾವ ನಾಲ್ಕು ಮಾತುಗಳು? ನಾಲ್ಕು ಮಾತುಗಳಲ್ಲಿಯ ಒಂದು ಮಾತನ್ನು ಹೇಳಿ ಹೇಗೆ ಸ್ಥೂಲ ವರದಕ್ಷಿಣೆಯನ್ನು ತಯಾರು ಮಾಡಿಕೊಂಡು ಬಂದಿರುವಿರೋ ಹಾಗೆ ಈಗ ಯಾವ ಪುರುಷಾರ್ಥದ ವರದಕ್ಷಿಣೆ ಬೇಕು? ಯಾವ ನಾಲ್ಕು ಮಾತುಗಳು? **ಒಂದು ಸದಾ ಜೀವನದ ಉದ್ದೇಶ ಎದುರಿಗಿರಬೇಕು, ಎರಡನೆಯದು ತಂದೆಯ ಆದೇಶ, ಮೂರನೆಯದು ಸಂದೇಶ ಮತ್ತು ನಾಲ್ಕನೆಯದು ಸ್ವದೇಶ, ಜೀವನದ ಉದ್ದೇಶ ಎದುರಿಗೆ ಇರುವುದರಿಂದ ಪುರುಷಾರ್ಥ ತೀವ್ರವಾಗಿ ಆಗುವುದು ಮತ್ತು ಬಾಪದಾದಾರ ಆದೇಶದ ಸ್ಥಿತಿ ಇಟ್ಟುಕೊಂಡು ಪುರುಷಾರ್ಥ ಮಾಡಿದರೆ ಪುರುಷಾರ್ಥದಲ್ಲಿಯೂ ಸಫಲತೆ ಸಿಗುವುದು, ಎಲ್ಲರಿಗೂ ಸಂದೇಶ ಕೊಡಬೇಕು, ಅದನ್ನು ಸೇವೆ ಎನ್ನುವರು ಮತ್ತು ಈಗ ಏನನ್ನು ನೆನಪಿಟ್ಟುಕೊಳ್ಳಬೇಕು? ಸ್ವದೇಶವಾದ ನಮ್ಮ ಮನೆಗೆ ಈಗ ಹೋಗಬೇಕು. ಈಗ ವಾಪಸ್ಸು ಹೋಗುವ ಸಮಯವಾಗಿದೆ.** ಸಮಯ ಸಮೀಪ ಬಂದಿದೆ. ಈ ನಾಲ್ಕು ಮಾತುಗಳಲ್ಲಿ ಯಾವುದೊಂದರ ಕೊರತೆಯಿದ್ದರೆ ಆ ಕೊರತೆಯ ಹೆಸರೇ ದುರ್ಬಲ ಪುರುಷಾರ್ಥಿ, ಕೊರತೆ ತುಂಬಲು ಈ ನಾಲ್ಕು ಶಬ್ದಗಳನ್ನು ಮುಂದಿಟ್ಟುಕೊಳ್ಳಿ.

ಬಾಪ್ ದಾದಾ ಇಂದು ಮಕ್ಕಳಿಗೆ ಒಂದು ಹೊಸ ಬಿರುದನ್ನು ಕೊಡುತ್ತಿದ್ದಾರೆ. ಕಾನೂನು ನಿರ್ಮಾಪಕರು/ ಲಾ ಮೇಕರ್ಸ್ (ಕಾಯಿದೆ ಅಥವಾ ಕಾನೂನನ್ನು ತಯಾರು ಮಾಡುವವರು). ಆ ಜನ ಪೀಸ್ ಮೇಕರ್ಸ್ (ಶಾಂತಿ ಮಾಡುವವರು) ಎಂಬ ಬಿರುದನ್ನೂ ಕೊಡುತ್ತಾರೆ, ಆದರೆ ಇಂದು ಬಾಪ್ ದಾದಾ ಎಲ್ಲಾ ಮಕ್ಕಳಿಗೆ  ಲಾ ಮೇಕರ್ಸ್" ಎಂಬ ಬಿರುದನ್ನು ಕೊಡುತ್ತಿದ್ದಾರೆ. ಸತ್ಯಯುಗದಲ್ಲಿಯ ಕಾಯಿದೆಗಳನ್ನು ಮಾಡುವವರು ನೀವಾಗಿದ್ದೀರಿ. ನಾವು ಕಾಯಿದೆ ಮಾಡುವವರು ಎಂಬುದನ್ನು ಸ್ಮೃತಿಯಲ್ಲಿ ಇಟ್ಟುಕೊಂಡರೆ ಪ್ರತಿಯೊಂದು ಹೆಜ್ಜೆಯನ್ನು ವಿಚಾರ ಮಾಡಿ ಇಡುವಿರಿ. ತಾವು ಯಾವ ಹೆಜ್ಜೆಯಿಡುವಿರೋ ಅದು ಕಾಯಿದೆಯಾಗುವುದೆಂದು ತಿಳಿಯಿರಿ. ಹೇಗೆ ನ್ಯಾಯಾಧೀಶ ಅಥವಾ ಮುಖ್ಯ ನ್ಯಾಯಾಧೀಶರು ನಿರ್ಣಯಿಸುವ ಮಾತು ಕಾಯಿದೆ ಆಗುತ್ತದೆಯೋ, ಹಾಗೆಯೇ ಇಲ್ಲಿಯೂ ನ್ಯಾಯಾಧೀಶರು ಕುಳಿತಿರುವಿರಿ, ಆದ್ದರಿಂದ ಕಾನೂನು ನಿರ್ಮಾಪಕರು ಅಂತಹ ಯಾವುದೇ ಕಾರ್ಯವನ್ನು ಮಾಡಬಾರದು. ಕಾಯ್ದೆ ಮಾಡುವವರು ಎಂದ ಮೇಲೆ ಯಾವ ಸಂಕಲ್ಪಗಳನ್ನು ತಾವು ಮಾಡುವಿರೋ, ಯಾವ ಹೆಜ್ಜೆಯನ್ನು ತಾವು ಇಡುವಿರೋ, ಅದನ್ನು ನೋಡಿ ಇಡೀ ವಿಶ್ವ ಅನುಸರಿಸುವುದು. ತಮ್ಮ ಪ್ರಜೆಗಳು ತಮ್ಮನ್ನು ಅನುಸರಿಸುವರು. ಆದ್ದರಿಂದ ತಮ್ಮನ್ನು ಈ ರೀತಿ ತಿಳಿದು ನಂತರ ಪ್ರತಿಯೊಂದು ಕರ್ಮವನ್ನು ಮಾಡಿ ಇದರಲ್ಲಿಯೂ ನಂಬರ್ ಇದೆ ಆದರೆ ಎಲ್ಲಾ ಮಕ್ಕಳು ಕಾಯಿದೆ ಮಾಡುವವರೇ ಆಗಿದ್ದಾರೆ.

ಇಂದು ಬಾಪ್ ದಾದಾ ಈ ಸಭೆಯನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಎಷ್ಟೊಂದು ಕಾನೂನು ನಿರ್ಮಾಪಕರು ಸೇರಿದ್ದಾರೆ. ಈ ರೀತಿ ತಮ್ಮನ್ನು ತಿಳಿದು ನಡೆಯುತ್ತೀರಾ? ಇಷ್ಟು ದೊಡ್ಡ ಜವಾಬ್ದಾರಿಯನ್ನು ತಿಳಿದು ನಡೆಯುವುದರಿಂದ ಸಣ್ಣಪುಟ್ಟ ಮಾತುಗಳು ತಾವೇ ಕೊನೆಯಾಗುವವು. **ಯಾವ ಕರ್ಮವನ್ನು ನಾನು ಮಾಡುತ್ತೇನೆಯೋ ಅದನ್ನು ನೋಡಿ ಎಲ್ಲರೂ ಮಾಡುತ್ತಾರೆ** ಎಂಬ ಸ್ಲೋಗನ್  ಸಹ ಇದೆ, ಈ ಸ್ಲೋಗನ್ ಸದಾ ನೆನಪಿಟ್ಟುಕೊಂಡರೆ ಆಗ ಎಲ್ಲಾ ಕಾರ್ಯ ಸರಿಯಾಗಿ ಮಾಡುವಿರಿ, ತಮ್ಮನ್ನು ಒಂಟಿ ಎಂದು ತಿಳಿದುಕೊಳ್ಳಬೇಡಿ, ತಾವು ಒಬ್ಬರ ಹಿಂದೆ ತಮ್ಮ ರಾಜಧಾನಿಯಿದೆ. ಅವರೂ ತಮ್ಮನ್ನು ನೋಡುತ್ತಿದ್ದಾರೆ. ಆದ್ದರಿಂದ ನಾನು ಯಾವ ಕರ್ಮವನ್ನು ಮಾಡುವೆನೋ, ನನ್ನನ್ನು ನೋಡಿ ಎಲ್ಲರೂ ಮಾಡುವರು ಎಂಬುದು ನೆನಪಿರಲಿ, ಇದರಿಂದ ಏನಾಗುವುದೆಂದರೆ ಎಲ್ಲರ ಸ್ವಭಾವ ಅಥವಾ ಸಂಸ್ಕಾರಗಳ ಸಮರ್ಪಣಾ ಸಮಾರಂಭ ಬೇಗನೆ ಆಗುವುದು. ಈಗ ಈ ಸಮಾರಂಭವನ್ನು ಸ್ಟೇಜಗೆ ತರಲು ಬೇಗನೆ ತಯಾರಿ ಮಾಡಿ, ಒಳ್ಳೆಯದು.

**ಇಬ್ಬರು ಕುಮಾರಿಯರ ಸಮರ್ಪಣಾ ಸಮಾರಂಭ.**

ಇಂದು ಯಾವ ಕಾರ್ಯಕ್ಕಾಗಿ ಕರೆಯಲಾಗಿದೆ? ಸತ್ಯಯುಗದಲ್ಲಿ ತಂದೆ- ತಾಯಿಯರು ರಾಜಸಿಂಹಾಸನದ ಮೇಲೆ ಕೂಡಿಸುತ್ತಾರೆ. ಸಂಗಮದಲ್ಲಿ ಯಾವ ರಾಜತಿಲಕ ಸಿಗುತ್ತದೆ ಗೊತ್ತಾ? ಸಂಗಮದ ತಿಲಕ ಹಚ್ಚಲ್ಪಟ್ಟಿದೆಯೋ ಅಥವಾ ಹಚ್ಚಬೇಕೋ? ಸಂಗಮದ ಸಿಂಹಾಸನಾರೂಢರಾಗಿದ್ದೀರಾ? ಸೇವೆಯ ಜವಾಬ್ದಾರಿಯ ಕಿರೀಟವಿದೆ, ಸಿಂಹಾಸನ ಯಾವುದು? ಸಂಗಮದ ಸಿಂಹಾಸನದ ನಂತರವೇ ಸತ್ಯಯುಗದ ಸಿಂಹಾಸನಾರೂಢರಾಗುವಿರಿ. ಸರ್ವ ಆಭರಣಗಳಿಂದ ಶೃಂಗಾರ ಮಾಡಿಕೊಂಡಿರುವಿರಾ ಅಥವಾ ಮಾಡಿಕೊಳ್ಳಬೇಕೋ? ಈ ಸಮಯ ಆಭರಣಗಳಿಂದ ಶೃಂಗರಿಸಲ್ಪಟ್ಟಿರುವಿರಿ. ಸಂಗಮಯುಗದಿಂದಲೇ ಈ ಸಂಪ್ರದಾಯಗಳು ಆರಂಭವಾಗುತ್ತವೆ ಏಕೆಂದರೆ ಸಂಗಮಯುಗ ಸರ್ವ ಮಾತುಗಳಿಗೆ ಬೀಜ ಬಿತ್ತುವ ಸಮಯ, ಹೇಗೆ ಬೀಜ ಬಿತ್ತುವ ಸಮಯವಿರುತ್ತದೆಯೋ ಹಾಗೆಯೇ ಪ್ರತಿಯೊಂದು ದೈವೀ ಸಂಪ್ರದಾಯದ ಬೀಜ ಹಾಕುವ ಸಮಯ ಈ ಸಂಗಮಯುಗವಾಗಿದೆ. ಬೀಜರೂಪದಿಂದ ಸರ್ವ ಮಾತುಗಳಿಗೆ ಬೀಜ ಬೀಳುತ್ತದೆ. ಆ ಬೀಜರೂಪದ ಜೊತೆಜೊತೆಗೆ ತಾವೆಲ್ಲರೂ ಬೀಜ ಹಾಕುವ ಸಹಯೋಗವನ್ನು ಕೊಡಬೇಕು. ಈ ದಿನ ಕೇವಲ ಸಾಧಾರಣ ಕಾರ್ಯಕ್ರಮವಾಗುತ್ತಿಲ್ಲ. ಆದರೆ ತಾವೆಲ್ಲರೂ, ಕಾಯಿದೆ ಮಾಡುವವರು ಎಂದು ಹೇಳಿದ್ದೇವಲ್ಲವೇ? ಇದು ಸಂಪ್ರದಾಯಕ್ಕೆ ಬೀಜ ಹಾಕುವ ದಿವಸ ಇಷ್ಟು ನಡೆಯಿದೆಯಲ್ಲವೇ? ಇದರ ಎಲ್ಲಾ

ಸಂಪ್ರದಾಯ ಬ್ರಾಹ್ಮಣರ ಮುಖಾಂತರ ಆಗುತ್ತದೆ. ಎಷ್ಟು ದೊಡ್ಡ ಕೆಲಸ ಮಾಡಲು ನಿಮಿತ್ತರಾಗಿರುವಿರಿ? ವಿಶ್ವ ಪರಿವರ್ತನೆಗೆ. ಎಷ್ಟು ಸಮಯದಲ್ಲಿ ವಿಶ್ವವನ್ನು ಪರಿವರ್ತಿಸುವಿರಿ? ತಮ್ಮನ್ನು ಎಷ್ಟು ಸಮಯದಲ್ಲಿ ತಯಾರು ಮಾಡುವಿರಿ? ಸದಾಸಿದ್ಧರಾಗಿರುವಿರಾ? ಇಂದು ಎಲ್ಲರೂ ತಮ್ಮನ್ನು ಯಾವ ರೂಪದಲ್ಲಿ ಅನುಭವ ಮಾಡುತ್ತಿರುವಿರಿ? ಯಾವ ರೂಪದಲ್ಲಿ ಕುಳಿತಿರುವಿರಿ? ಎಂತಹ ದಿನವೋ ಅಂತಹ ರೂಪವಿರುತ್ತದೆ. ಈ ಸಂಗಮದ ಸಭೆ ಸತ್ಯಯುಗದ ಸಭೆಗಿಂತಲೂ ಉನ್ನತವಾಗಿರುವುದು. ಎಲ್ಲರೂ ತಮ್ಮನ್ನು ಸರ್ವ ಶೃಂಗಾರಗಳಿಂದ ಶೃಂಗರಿಸಲ್ಪಟ್ಟಂತೆ ನೋಡಿಕೊಳ್ಳುತ್ತಿರುವಿರೋ ಅಥವಾ ಈ ಕುಮಾರಿಯರನ್ನು ಮಾತ್ರ ನೋಡುತ್ತಿರುವಿರೋ? ತಮ್ಮ ಒಂದೊಂದು ಸಂಗಮಯುಗದ ಶೃಂಗಾರ ಸತ್ಯಯುಗದ ಶೃಂಗಾರಕ್ಕಿಂತ ಶ್ರೇಷ್ಠವಾಗಿದೆ. ಆದ್ದರಿಂದ ಬಾಪ್ ದಾದಾ ಎಲ್ಲಾ ಶೃಂಗರಿಸಲ್ಪಟ್ಟ ಮೂರ್ತಿಗಳನ್ನೂ ನೋಡುತ್ತಿದ್ದಾರೆ. ಸಂಗಮದ ಕಿರೀಟ ಧರಿಸಿದ್ದೀರಲ್ಲವೇ? ಸತ್ಯಯುಗದ ಕಿರೀಟ, ಈ ಕಿರೀಟದ ಮುಂದೆ ಏನೂ ಅಲ್ಲ, ಈ ಕಿರೀಟ ಮತ್ತು ಸಿಂಹಾಸನ ಸದಾ ಕಾಯಂ ಆಗಿರಲು ಯಾವ ಪ್ರಯತ್ನ ಮಾಡುವಿರಿ? ಇದಕ್ಕಾಗಿ ಮೂರು ಮಾತುಗಳನ್ನು ನೆನಪಿಟ್ಟುಕೊಳ್ಳಬೇಕು. ಸ್ವಯಂವರದ ಸಮಾರಂಭದಲ್ಲಿ, ಕಿರೀಟಧಾರಣೆಯಂದು ಯಾವ ಸಂಪ್ರದಾಯಗಳು ನಡೆಯುತ್ತವೆಯೋ ಅವೆಲ್ಲವೂ ಈ ಸಂಗಮದಲ್ಲಿಯೇ ಯಾವುದಾದರೂ ರೂಪದಲ್ಲಿ ಇರುತ್ತವೆ. ಇಂದಿನ ಜಗತ್ತಿನಲ್ಲಿ ಯಾವ ಸಂಪ್ರದಾಯಗಳಿವೆಯೆಂದು ಗೊತ್ತಿದೆಯಾ? ಎಷ್ಟು ಪ್ರಕಾರದ ಸಂಪ್ರದಾಯಗಳಿವೆ? ಒಂದು ಬ್ರಾಹ್ಮಣರ ಮುಖಾಂತರ, ಎರಡನೆಯದು ಕೋರ್ಟ್ ನಿಂದ, ಮೂರನೆಯದು ಮಂದಿರ ಮತ್ತು ಗುರುಗಳಿಂದ ಈ ಮೂರೂ ಸಂಪ್ರದಾಯಗಳ ಬೀಜ ಇಲ್ಲಿ ಯಾವುದಾದರೂ ರೀತಿಯಿಂದ ಬೀಳುತ್ತದೆ. ಈ ಮಧುಬನ ಮಂದಿರವೂ ಆಗಿದೆ, ಚೈತನ್ಯ ಈ ಮಂದಿರದ ಮಧ್ಯದಲ್ಲಿ ಆತ್ಮ ಮತ್ತು ಪರಮಾತ್ಮರ ಲಗ್ನವಾಗುತ್ತದೆ. ಜೊತೆಜೊತೆಗೆ ಕೋರ್ಟನ ಪದ್ಧತಿಯೂ ಇಲ್ಲಿಂದಲೇ ಶುರುವಾಗುತ್ತದೆ. ತಾವು ಕಾನೂನು ನಿರ್ಮಾಪಕರು ಎಂದು ಹೇಳಿದ್ದೆವಲ್ಲವೇ? ಇವರ ಮುಂದೆ ಈ ವಾಯಿದೆ ಮಾಡುವಿರಿ ಎಂದರೆ ಕೋರ್ಟ ಆಯಿತಲ್ಲವೇ? ಈ ಮೂರೂ ಸಂಪ್ರದಾಯಗಳು ಈ ಸಂಗಮದಲ್ಲಿ ಅಲೌಕಿಕ ರೂಪದಲ್ಲಿ ನಡೆಯುವುದರ ಯಾದಗಾರ ಸ್ಥೂಲ ರೂಪದಲ್ಲಿ ನಡೆಯುತ್ತಿರುತ್ತದೆ.

ಯಾವ ಮೂರೂ ಮಾತುಗಳನ್ನು ನೆನಪಿಟ್ಟುಕೊಳ್ಳಬೇಕು? ಒಂದು ಉಪಕಾರಿ, ಎರಡನೆಯದಾಗಿ ನಿರಹಂಕಾರಿ, ಮೂರನೆಯದು ಅಧಿಕಾರಿ ಎಂದು ತಿಳಿದು ನಡೆಯಬೇಕು. ಅಧಿಕಾರಿ ಎಂಬುದನ್ನು ಸಮ್ಮುಖದಲ್ಲಿಟ್ಟುಕೊಳ್ಳಬೇಕು ಮತ್ತು ನಿರಹಂಕಾರದ ಗುಣವನ್ನು ಮತ್ತು ಉಪಕಾರ ಮಾಡುವ ಕರ್ತವ್ಯವನ್ನೂ ಮುಂದೆ ಇಟ್ಟುಕೊಳ್ಳಬೇಕು. ಈ ಮೂರೂ ಮಾತುಗಳನ್ನು ಸದಾ ನೆನಪಿಟ್ಟುಕೊಂಡು ಯಾರು ಎಷ್ಟೇ ಅಪಕಾರಿಯಾಗಿರಲಿ ಆದರೆ ತಮ್ಮ ದೃಷ್ಟಿ ಮತ್ತು ವೃತ್ತಿ ಉಪಕಾರಿಯಾಗಿರಲಿ. ಅಧಿಕಾರಿ ಎಂದು ತಿಳಿದು ನಡೆಯಬೇಕು, ಆದರೆ ನಿರಹಂಕಾರಿಯೂ ಆಗಿರಬೇಕು. ಎಷ್ಟು ಅಧಿಕಾರಿಯೋ ಅಷ್ಟು ನಿರಹಂಕಾರಿ, ಆಗ ಈ ಕಿರೀಟ ಮತ್ತು ಸಿಂಹಾಸನ ಸದಾ ಕಾಯಂ ಇರುವುದು, ತಿಳಿಯಿತೇ? ಒಳ್ಳೆಯದು.

ಲಾ ಮೇಕರ್ಸ್-1 ( ಕಾನೂನು ನಿರ್ಮಾಪಕರು-1 ).

ಅವ್ಯಕ್ತ ಮುರಳಿ 14-05-1970.

**ಸಮರ್ಪಣೆಯ ಗುಹ್ಯ ಅರ್ಥ.**

ಬಾಪ್ ದಾದ ಇಂದು ಮಕ್ಕಳಿಗೆ ಒಂದು ಹೊಸ ಬಿರುದು (ಟೈಟಲ್) ಕೊಡುತ್ತಿದ್ದಾರೆ. "ಲಾ ಮೇಕರ್ಸ್" ( ನಿಯಮ ರೂಪ ಕರ್ತರು/ ಕಾನೂನು ನಿರ್ಮಾಪಕರು). ಸತ್ಯಯುಗದಲ್ಲಿ ಯಾವ ನಿಯಮಗಳು ನಡೆಯುತ್ತವೆಯೋ ಅವುಗಳನ್ನು ತಯಾರು ಮಾಡುವವರು ನೀವೇ, "ನಾವು ಲಾ ಮೇಕರ್ಸ್" ಎಂಬ ಸ್ಮೃತಿ ಇರುವುದರಿಂದ ಪ್ರತಿಯೊಂದು ಹೆಜ್ಜೆ ಯೋಚಿಸಿ, ಅರ್ಥ ಮಾಡಿಕೊಂಡು ಹಾಕುತ್ತೀರಿ.

ನೀವು ಯಾವ ಹೆಜ್ಜೆಯನ್ನು ಹಾಕುತ್ತಿರೋ ಅದು ನಿಯಮವಾಗಿ ತಯಾರಾಗುತ್ತದೆ. ಎಂದು ತಂದೆ ಹೇಳಿರುವ ಮಹಾವಾಕ್ಯಗಳ ಆಧಾರದಿಂದ ಆತ್ಮಿಕ ಸ್ಥಿತಿಯಲ್ಲಿದ್ದು ನಾವು ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ರುದ್ರ ಜ್ಞಾನ ಯಜ್ಞದಲ್ಲಿ ನನ್ನ ಸ್ವಭಾವ, ದೇಹಾಭಿಮಾನ, ಮತ್ತು ಸಂಬಂಧಗಳನ್ನು ಸಮರ್ಪಣೆ ಮಾಡಿ ಸಂಪೂರ್ಣಮೂರ್ತಿರಯಾಗಿದ್ದೇನೆ.

2. ಸಂಪೂರ್ಣ ಸಮರ್ಪಣೆ ಯಾದ ಕಾರಣ ನನಗೆ ಬಾಬಾರವರಿಂದ ಸಂಪೂರ್ಣ ಸೌಭಾಗ್ಯ ( ಬಿಂದು ರೂಪ ಸ್ಥಿತಿ) ಮತ್ತು ಶ್ರೇಷ್ಠ ಭಾಗ್ಯ ವರದಕ್ಷಿಣೆಯಾಗಿ ಸ್ವತಃ ಪ್ರಾಪ್ತಿಯಾಯಿತು.

3. ನಾನು ಲಾ ಮೇಕರ್ ಆಗಿದ್ದೇನೆ, ಎಲ್ಲರೂ ಲಾ ಮೇಕರ್ಸ ಆಗಿದ್ದಾರೆ.

4. ನಾನು "ನನ್ನ ಜೀವನದ ಉದ್ದೇಶ" ವನ್ನು ಎದುರಿಗೆ ಇಟ್ಟುಕೂಂಡು ಪುರುಷಾರ್ಥವನ್ನು ತೀವ್ರ ಮಾಡಿಕೊಂಡಿದ್ದೇನೆ.

5. ಬಾಪ್ ದಾದಾರ ಆದೇಶವನ್ನು ಸ್ಮೃತಿಯಲ್ಲಿಟ್ಟುಕೊಂಡು ಪುರುಷಾರ್ಥದಲ್ಲಿ ಸಫಲತೆಯನ್ನು ಹೊಂದಿದ್ದೇನೆ.

6. ಎಲ್ಲರಿಗೂ 'ಸಂದೇಶ' ಕೊಡುವ ಸೇವೆ ಮಾಡುತ್ತಿದ್ದೇನೆ.

7. ನಾನು ಸ್ವದೇಶಕ್ಕೆ (ಮನೆಗೆ) ಹಿಂತಿರುಗಿ ಹೋಗುತ್ತಿದ್ದೇನೆ.

8. ಲಾ ಮೇಕರ್ ಆದ ನಾನು ಯಾವ ಹೆಜ್ಜೆ ಇಡುತ್ತೇನೆಯೋ ಅದೇ ಕಾಯಿದೆಯಾಗಿ(ನಿಯಮ) ತಯಾರಾಗುತ್ತಿದೆ.

9. ಲಾ ಮೇಕರ್ ಆದ ನಾನು ಯಾವ ಸಂಕಲ್ಪ ಮಾಡುತ್ತೇನೆಯೋ, ಯಾವ ಹೆಜ್ಜೆ ಇಡುತ್ತೇನೆಯೋ, ಯಾವ ಕರ್ಮ ಮಾಡುತ್ತೇನೆಯೋ, ನನ್ನನ್ನು ನೋಡಿ ಇಡೀ ವಿಶ್ವ ಅನುಸರಿಸುತ್ತಿದೆ (ಫಾಲೋ), ಅದೇ ನಿಯಮವಾಗಿ ತಯಾರಾಗುತ್ತಿದೆ.

10. ನಾನು ಒಂಟಿಯಲ್ಲ, ಲಾ ಮೇಕರ್ ಆದ ನನ್ನ ಹಿಂದೆ ನನ್ನ ರಾಜಧಾನಿ ಇದೆ.